## ಪರಿಚಯ

ನಮ್ಮ ಕಾಲೇಜಿನ ವಾರ್ಷಿಕ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಪ್ರಸಿದ್ಧ ನ್ಯಾಯವಾದಿ ನಾನಿ ಪಾಲ್ಖೀವಾಲ ಆಗಮಿಸಿದ್ದರು. ಮೊದಲಿಗೆ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಡಬೇಕಾಗಿತ್ತು. ಆಗ ನಮ್ಮ ಪ್ರಿನ್ಸಿಪಾಲರು, 'ಸುಪ್ರಸಿದ್ಧ ನ್ಯಾಯವಾದಿ ನಾನಿ ಪಾಲ್ಖೀವಾಲರ ಪರಿಚಯ ನಿಮಗೆಲ್ಲ ಇದ್ದೇ ಇದೆ. ಆದರೆ ನಿಮಗೆ ಬೇಕಿರುವುದು ನನ್ನ ಪರಿಚಯ' ಎಂದರು. ಪ್ರಿನ್ಸಿಪಾಲರ ಮಾತಿನಿಂದ ಗಲಿಬಿಲಿಗೊಂಡ ನಾವು ಒಬ್ಬರ ಮುಖ ಒಬ್ಬರು ನೋಡುತ್ತ ಕುಳಿತೆವು. ಆಗ ಮುಂದುವರಿದು ಮಾತನಾಡಿದ ಪ್ರಿನ್ಸಿಪಾಲರು, 'ನೀವು ಕಾಲೇಜಿಗೆ ಬರುವುದೇ ಅಪರೂಪ. ನನಗೆ ಇಲ್ಲಿ ಹೊಸ ಮುಖಗಳೇ ಹೆಚ್ಚು ಕಾಣಿಸುತ್ತಿವೆ. ಹಾಗಾಗಿ ಮೊದಲಿಗೆ ನನ್ನ ಪರಿಚಯ ಮಾಡಿಕೊಡುತ್ತೇನೆ' ಎಂದಾಗ ಪಾಲ್ಖೀವಾಲಾ ಅವರಿಗೆ ನಗು ತಡೆಯಲಾಗಲಿಲ್ಲ.

**ಸೋಮನಾಥ ಎಸ್. ಕರ್ಕೇರ, ಮುಂಬೈ**






## ಯಾ ನಮೂನಿ ಮಸಿ...

ತನ್ನ ಅಚ್ಚುಕಟ್ಟಾದ ಕೆಲಸ ಹಾಗೂ ಮುಗ್ಧ ಮನಸ್ಸಿನಿಂದ ನಮ್ಮ ಮನೆಯ ಕೆಲಸದ ನಾಗಮ್ಮ ನಮಗೆಲ್ಲ ಅಚ್ಚುಮೆಚ್ಚು. ಇತ್ತೀಚೆಗೆ ನಮ್ಮ ಮನೆಯ ಕೆಲಸಕ್ಕೆ ತನ್ನ ಸೊಸೆಯನ್ನೇ ಕಳುಹಿಸುತ್ತಿದ್ದ ನಾಗಮ್ಮ ಅಪರೂಪಕ್ಕೆ ಒಂದು ಭಾನುವಾರ ತಾನೇ ಬಂದಿದ್ದಳು. ನಾನು ಅಡುಗೆ ಮನೆಯಲ್ಲಿದ್ದೆ. 'ಇದೊಂದು... ಯಾ ನಮೂನಿ ಮಸಿ ಮಾಡಿದ್ದೀರಿ? ತಿಕ್ಕಿ ತಿಕ್ಕಿ ಕೈಯೆಲ್ಲ ನೋವು. ಉಸ್ಸಪ್ಪಾ!' ಎನ್ನುತ್ತ ತೊಳೆದ ಪಾತ್ರೆಗಳನ್ನೆಲ್ಲ ಅಡಿಗೆ ಮನೆಯಲ್ಲಿ ಇಟ್ಟಳು. 'ಅದ್ಯಾವ ಪಾತ್ರೆ ಅಷ್ಟು ಮಸಿಯಾಯಿತು?' ಎಂದು ನಾನು ಕೇಳಿದೆ. 'ಇದೇ ನೋಡಿ' ಎಂದ ನಾಗಮ್ಮ ಹೊಳೆಯುತ್ತಿರುವ, ಉದ್ದ ಹಿಡಿ ಇರುವ ಪಾತ್ರೆಯನ್ನು ನನ್ನ ಮುಂದೆ ಹಿಡಿದಳು. ಕೈಯಲ್ಲಿ ಹಿಡಿದು ನೋಡಿದೆ. ಬೆಳಿಗ್ಗೆ ತಾನೆ ತಿಂಡಿ ಮಾಡಲು ಉಪಯೋಗಿಸಿದ್ದ ಹೊಸ ನಾನ್‌ಸ್ಟಿಕ್ ದೋಸೆ ಕಾವಲಿ ಅದಾಗಿತ್ತು! ಇದನ್ನು ತಿಕ್ಕಿ ತಿಕ್ಕಿ ಬಿಳಿ ಮಾಡಲು ಹೋಗಿ ಕೈನೋಯಿಸಿಕೊಂಡ ನಾಗಮ್ಮನನ್ನು ನೋಡಿ ನಕ್ಕು ಸುಸ್ತಾಯಿತು.

**ಮಂದಾರ, ಬಂಟ್ವಾಳ**